ಇಲಾಖೆಯವರು ಅದನ್ನು ಯಾವ ರೀತಿ ಅಭಿವೃದ್ಧಿ ಮಾಡಬೇಕೆಂದು ಸಮೀಕ್ಷೆ ನಡೆಸುತ್ತಿದ್ದಾರೆ. ಆ ಸಮೀಕ್ಷೆಯಂ ವರದಿ ಬಂದಕೂಡಲೇ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

೭ ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದವರು ಹೊಸ ಲೇಔಟ್ ರಚನೆ ಮಾಡಿ ಸೈಟ್‌ಗಳನ್ನು ಹಂಚಿಕೆ ಮಾಡುವ ಬಗ್ಗೆ

SRI SHAFI AHMED.—Sir, I would like to draw the attention of the Minister for Housing and Urban Development regarding the action taken by the TUDA (Tumkur Urban Development Authority) for formation of new layouts and distribution of sites to the siteless people of Tumkur District.

ಶ್ರೀ ಎಂ. ವೀರಪ್ಪ ಮೊಯ್ಲಿ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಲೇಔಟ್ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಅದನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

೭ ಟರ್ನ್‌ಓವರ್ ಟ್ಯಾಕ್ಸ್ ರದ್ದು ಪಡಿಸುವ ಬಗ್ಗೆ

ಶ್ರೀ ಜಿ.ಎಸ್. ಆಚಾರ್.— ಮಾನ್ಯ ಅಧ್ಯಕ್ಷರೇ. ಸರಕಾರ ನಿಗದಿ ಮಾಡಿದ ನಿಯಂತ್ರಿತ ವಸ್ತುಗಳನ್ನು ನಿರ್ದಿಷ್ಟ ದರದಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಗ್ರಾಹಕರಿಗೆ ವಿತರಣೆ ಮಾಡುವ ಕೆಲಸವನ್ನು ರಾಜ್ಯಾದ್ಯಂತ ಅನೇಕ ಸಹಕಾರಿ ಸಂಸ್ಥೆಗಳಿಗೆ ನೀಡಲಾಗಿದೆ. ಕರ್ನಾಟಕ ಮಾರಾಟ ತೆರಿಗೆ ಕಾನೂನು ೧೯೫೭ರ ಪ್ರಕಾರ ನ್ಯಾಯ ಬೆಲೆ ಅಂಗಡಿ ನಡೆಸುವ ಸಹಕಾರಿ ಸಂಸ್ಥೆಗಳು ೧-೪-೧೯೮೪ರಿಂದ ಪಾಮೋಲಿನ್ ಎಣ್ಣೆ, ಗೋಧಿ, ಜೋಳ ಇತ್ಯಾದಿಗಳಿಗೆ ಮಾರಾಟ ತೆರಿಗೆ ನೀಡಬೇಕಾಗಿಲ್ಲವೆಂದು ವಿಧಿಸಿದ್ದರೂ ಸಹಾ ಕುಂದಾಪುರ ತಾಲ್ಲೂಕು ಕೃಷಿ ಉತ್ಪನ್ನ ಸಹಕಾರಿ ಸಂಘವು ೧೯೮೬-೮೭ನೇ ವರ್ಷಕ್ಕೆ ರೂ. ೧೩,೧೮೫ ಮತ್ತು ೧೯೮೭-೮೮ನೇ ವರ್ಷಕ್ಕೆ ರೂ. ೫೫,೩೨೯ ಟರ್ನ್‌ಓವರ್ ಟ್ಯಾಕ್ಸ್ ನೀಡಲು ಕುಂದಾಪುರದ ವಾಣಿಜ್ಯ ತೆರಿಗೆ ಅಧಿಕಾರಿಗಳು ಆದೇಶಿಸಿರುತ್ತಾರೆ. ತಕ್ಷಣದಲ್ಲಿ ದಂಡ ವಿಧಿಸುವ ನಿಬಂಧನೆ ಸಹಾ ಇರುತ್ತದೆ. ಪಾಮೋಲಿನ್ ಎಣ್ಣೆಯನ್ನು ಕಾರ್ಡುದಾರರಿಗೆ ಮಾರುವ ದರ ನಿರ್ಧರಿಸುವಾಗ ಟರ್ನ್‌ಓವರ್ ಟ್ಯಾಕ್ಸಿನ ಪೊತ್ತವನ್ನು ಪರಿಗಣಿಸದೆ ಇರುವುದರಿಂದ ವ್ಯವಹರಿಸುವ ಸಂಘಗಳು ತುಂಬ ನಷ್ಟಕ್ಕೀಡಾಗುವ ಸಂಭವ ಬಂದಿದೆ. ಸರ್ಕಾರದ ಪರವಾಗಿ ಸರಕಾರದ ಸ್ವಾಮ್ಯವನ್ನು ನ್ಯಾಯಬೆಲೆಗೆ ಮಾರುವ ಈ ವ್ಯವಸ್ಥೆಯಲ್ಲಿ ಟರ್ನ್‌ಓವರ್ ಟ್ಯಾಕ್ಸ್ ವಿಧಿಸಬಾರದೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ.ಜೆ. ಜಾರ್ಜ್.— ಸನ್ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ಹಣಕಾಸಿನ ಮಂತ್ರಿಗಳವರ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು.— ಈಗ ಮಾನ್ಯ ಸಾರಿಗೆ ಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ.

ಮಂತ್ರಿಯವರಿಂದ ಹೇಳಿಕೆ

ಆಟೋ ದರಪತ್ರವನ್ನು ಪರಿಷ್ಕರಿಸಿರುವ ಬಗ್ಗೆ

ಶ್ರೀ ಕೆ. ಜೆ. ಜಾರ್ಜ್ (ಆಹಾರ ಮತ್ತು ಸಾರಿಗೆ ರಾಜ್ಯ ಸಚಿವರು).— ಮಾನ್ಯ ಅಧ್ಯಕ್ಷರೇ,

This morning I had negotiations with the Autorikshaw Driver's Union (CITU) in connection with the Auto agitation in Bangalore City.

The Autorikshaw Drivers' Union have agreed to call off their agitation immediately. The Autorikshaw fares in Bangalore City and else where will be revised as follows Consequent to the increases of petrol, diesel and oil in the Union Budget.

a) Minimum fixed fare from Rs. 2.50 to Rs. 2 80 and

b) Fare per Km. from Rs. 1.30 to Rs. 1.50 respectively.

This revision will be effective from today and provisional.

As regards the demand of the Autorikshaw Drivers' Union for fixing the minimum fare at Rs. 3/-, this will be considered by the Experts Committee constituted by the State Government with the Transport Commissioner as the Chairman. A Meeting of this Committee has been convened on 9th April 1990 and the Committee will give its report to Government within 30 days.

ಸಾರ್ವಜನಿಕ ಮಹತ್ವವುಳ್ಳ ವಿಷಯದ ಪ್ರಸ್ತಾವ
ಬೆಳಗಾಂ ಮಹಾನಗರ ಪಾಲಿಕೆಯ ಕಟ್ಟಡದ ಮೇಲೆ ಹಾರಾಡುತ್ತಿರುವ
ಭಗವ ಜಂಡಾವನ್ನು ತೆಗೆಯುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ಬೆಳಗಾವಿ ಮಹಾನಗರ ಪಾಲಿಕೆ ಚುನಾವಣೆಯನ್ನು ಮುಂದೂಡ ಬೇಕೆಂದು ಒಂದು ವರ್ಷದಿಂದ ಕೇಳುತ್ತಿದ್ದಾರೆ.

ಅಧ್ಯಕ್ಷರು.—ಅದಕ್ಕೂಂದು ತಿದ್ದುಪಡಿ ಇಲ್ಲಿ ಬರುತ್ತಾ ಇದೆ.

ಶ್ರೀ ವಾಟಾಳ್ ನಾಗರಾಜ್.—ಬೆಳಗಾವಿಯಿಂದ ೫ ಸಾವಿರ ಜನರ ನಿಯೋಗ ಬೆಂಗಳೂರಿಗೆ ಬಂದಿದೆ. ಬೆಳಗಾವಿ ಮಹಾನಗರ ಪಾಲಿಕೆಯ ಕಟ್ಟಡದ ಮೇಲೆ ಹಾರಾಡುತ್ತಿರುವ ಭಗವ ಜಂಡಾವನ್ನು ಯಾವಾಗ ತೆಗೆಯುತ್ತೀರಿ ? ಸರ್ಕಾರದ ಪರವಾಗಿ ಉತ್ತರ ಹೇಳಬೇಕು. ಇದು ಅತ್ಯಂತ ಘೋರ ಅಪರಾಧವಾಗುತ್ತದೆ. ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಚುನಾವಣೆ ಮಾಡಬೇಕೆಂದು ಸರ್ಕಾರವನ್ನು ಕೇಳುತ್ತಿದ್ದಾರೆ. ಈ ಬಗ್ಗೆ ಉತ್ತರ ದೊರೆಯದಿದ್ದರೆ ನಾನು ಧರಣಿ ಮಾಡಬೇಕಾಗುತ್ತದೆ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಹಾಕಿರತಕ್ಕ ಧ್ವಜವನ್ನು ತೆಗೆಯುವ ತೀರ್ಮಾನಕ್ಕೆ ಸರ್ಕಾರ ಬರಬೇಕು. ಇಲ್ಲದಿದ್ದರೆ ನಾನು ಧರಣಿ ಕುಳಿತುಕೊಳ್ಳುತ್ತೇನೆ. ಇದು ಬಹಳ ಅನ್ಯಾಯ. ನಾನು ತಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುತ್ತೇನೆ. ೫ ಸಾವಿರ ಜನ ಬೆಳಗಾವಿಯಿಂದ ರೈಲಿನಲ್ಲಿ ಬುತ್ತಿಕಟ್ಟಿಕೊಂಡು ಇಲ್ಲಿಗೆ ಬಂದಿದ್ದಾರೆ. ತಾವು ತಪ್ಪು ತಿಳಿದುಕೊಳ್ಳಬೇಡಿ.

ಅಧ್ಯಕ್ಷರು.—ನಿಮ್ಮನ್ನು ತಪ್ಪು ತಿಳಿಯುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನೀವು ನನ್ನಲ್ಲಿ ಆ ನಂಬಿಕೆ ಇಡಬೇಕು.

ಶ್ರೀ ವಾಟಾಳ್‌ನಾಗರಾಜ್.—ಮಾನ್ಯ ಮಂತ್ರಿಗಳಾದ ಮೊಯಿಲಿಯವರು ಅಲ್ಲಿರತಕ್ಕ ಬಾವುಟವನ್ನು ತೆಗೆಯುವ ನಿರ್ಧಾರ ತೆಗೆದುಕೊಳ್ಳುತ್ತಾರೆಯೆ ? ತಾವು ಸಹ ಹೇಳಿದ್ದೀರಿ ರಾಜ ಮಹಾರಾಜರ ಬಾವುಟಗಳೆಲ್ಲ ಹೋಗಿವೆ. ರಾಷ್ಟ್ರಧ್ವಜ ಒಂದೇ ಇರಬೇಕು. ಮರಾಠಿ ಧ್ವಜವನ್ನು ಯಾವಾಗ ತೆಗೆದು ಹಾಕುತ್ತಾರೆನ್ನುವ ಸ್ಪಷ್ಟ ಉತ್ತರ ಬೇಕು. ಆ ಬಾವುಟವನ್ನು ಯಾವತ್ತು ತೆಗೆಯುತ್ತಾರೆ ? ಬೆಳಗಾವಿ ಮಹಾನಗರ ಪಾಲಿಕೆಗೆ ಚುನಾವಣೆ ನಡೆದರೆ ನಮಗೆ ಒಳ್ಳೆ ಆನ್ಯಾಯವಾಗುತ್ತದೆ. ಅಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿ ಅಧಿಕಾರಕ್ಕೆ ಬರುತ್ತದೆ. ಅಲ್ಲಿನ ಕನ್ನಡಿಗರಿಗೆ ಕನ್ನಡದ ಅಭಿಮಾನ ಹೋಗುತ್ತದೆ. ಈ ಬಗ್ಗೆ ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡು ಹೇಳಬೇಕು.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ಎರಡು ವಿಚಾರಗಳನ್ನು ತರುತ್ತೇನೆ. ನಿನ್ನೆ ದಿವಸ ಮಾನ್ಯ ಪುಟ್ಟಸ್ವಾಮಿಗೌಡರು ಪಾರ್ಲಿಮೆಂಟ್.....

ಶ್ರೀ ವಾಟಾಳ್‌ನಾಗರಾಜ್.—ಮಾನ್ಯ ಅಧ್ಯಕ್ಷರೆ, ನಾನು ಧರಣಿ ಕುಳಿತುಕೊಳ್ಳುತ್ತೇನೆ. ಇದರಿ ಬಹಳ ಅನ್ಯಾಯ.

(ಈ ಹಂತದಲ್ಲಿ ಮಾನ್ಯ ಸದಸ್ಯರು ತಮ್ಮ ಪೀಠದಿಂದ ಹೊರಗೆ ಬಂದು ಸಭಾಧ್ಯಕ್ಷರ ಪೀಠದ ಮುಂಭಾಗದಲ್ಲಿ ಧರಣಿ ಕುಳಿತರು)